**ಇಂದು ದಿನಾಂಕ:*28.11.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎಸ್.ಎಂ.ಪಿ. ವಕೀಲರಿಂದಃ**

ನಾನು 7 ನೇ ತರಗತಿ ಓದಿದ್ದೇನೆ. ಕಾಳೇಗೌಡರ ಮಗ ಸಣ್ಣಕಾಳೇಗೌಡ ನನಗೆ ಚಿಕ್ಕಪ್ಪನಾಗಬೇಕು. ಸಣ್ಣಕಾಳೇಗೌಡರ ಮಗ ಬೋರೇಗೌಡ ನನ್ನ ತಂದೆ. ಸಣ್ಣಕಾಳೇಗೌಡ ಮತ್ತು ನನ್ನ ತಂದೆ ಅಸಲು ದಾವಾ ನಂಬರ್ 162/2022 ರಲ್ಲಿ ಇದೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ಆಸ್ತಿ ವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ದಾವೆಯನ್ನು ಸುಮಾರು 12 ಜನ ಪ್ರತಿವಾದಿಗಳ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿ. ಅಸಲು ದಾವಾ ನಂಬರ್ 162/2022 ರಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪನ ಪರವಾಗಿ ಡಿಕ್ರಿಯಾಗಿದೆ ಎಂದರೆ ಸರಿಯಲ್ಲ.

FDP 14/2020 ರಲ್ಲಿ ನನ್ನ ತಂದೆಯನ್ನು 14 ನೇ ಎದುರುದಾರರಾಗಿ ಸೇರಿದ್ದಾರೆ ಎಂದರೆ ಸುಳ್ಳು. FDP ಪ್ರಕರಣದಲ್ಲಿ ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗಿದ್ದರು ಎಂದರೆ ಸುಳ್ಳು. FDP ಪ್ರಕರಣದಲ್ಲಿ ನನ್ನ ತಂದೆಯನ್ನು ಏಕೆ ಎದುರುದಾರರನ್ನಾಗಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದಲ್ಲಿ ಎಲ್ಲಾ ನಿಜಾಂಶಗಳು ಗೊತ್ತಾಗುತ್ತವೆ ಎಂಬ ಕಾರಣಕ್ಕೆ ನಾನೇ ಅಧಿಕಾರ ಪತ್ರ ಪಡೆದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ್ 162/2022 ದಾವೆಯಲ್ಲಿ ಪೂರ್ವಕ್ಕೆ ಸವಳಯ್ಯ ಮತ್ತು ಇತರರ ಜಮೀನು, ಪಶ್ಚಿಮಕ್ಕೆ ಅಜ್ಜಯ್ಯ ಮತ್ತು ಇತರರ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಇನಾಮ್ ಜಮೀನು ಎಂದು ತೋರಿಸಿದ್ದರು ಎಂದರೆ ಸುಳ್ಳು. ಈಗ ಹೇಳಿದ ಚೆಕ್ಕುಬಂಧಿ ಮತ್ತು ನನ್ನ ತಾತನ ಕ್ರಯಪತ್ರದಲ್ಲಿರುವ ಚೆಕ್ಕುಬಂಧಿ ಒಂದೇ ಎಂದರೆ ಸುಳ್ಳು. ಮೇಲೆ ಹೇಳಿದ ಚೆಕ್ಕುಬಂಧಿ ಸ.ನಂ.1 ರಲ್ಲಿ 7 ಎಕರೆ 20 ಗುಂಟೆ ಜಮೀನಿಗೆ ಸಂಬಂಧಿಸಿದೆ ಎಂದರೆ ಸುಳ್ಳು.

ನನ್ನ ತಾತ ಸ.ನಂ.1 ರಲ್ಲಿ 2 ಎಕರೆ 29 ಗುಂಟೆ ಜಮೀನು ಕ್ರಯ ಮಾಡಿದ್ದಾರೆ. ನನ್ನ ತಾತ ಖರೀದಿಸಿರುವ ಜಮೀನಿನ ಪಶ್ಚಿಮಕ್ಕೆ ಉಳಿಕೆ 5 ಎಕರೆ ಜಮೀನು ಬರುತ್ತದೆ. ನನ್ನ ವಾದ ಪತ್ರದ ಪ್ರಕಾರ ಪಶ್ಚಿಮಕ್ಕೆ ಸಣ್ಣಕಾಳೇಗೌಡರ ಜಮೀನು ಎಂದು ಬರೆಸಿದ್ದೇನೆ ಎಂದರೆ ಗೊತ್ತಿಲ್ಲ. ಈ ಕೇಸಿನ 5 ರಿಂದ 14 ನೇ ಪ್ರತಿವಾದಿಗಳು ನನ್ನ ತಂದೆ ಸಲ್ಲಿಸಿದ್ದ ಎಫ್.ಡಿ.ಪಿ ನಂಬರ್ 14/2020 ರಲ್ಲಿ ತಕರಾರು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಪಿರಿಯಾಪಟ್ಟಣ ತಾಲ್ಲೂಕು, ಬೆಟ್ಟದಪುರ ಹೋಬಳಿ, ನಾಗನಹಳ್ಳಿ ಗ್ರಾಮದ ಸ.ನಂ.1 ರಲ್ಲಿ 7 ಎಕರೆ 29 ಗುಂಟೆ ವಿಸ್ತೀರ್ಣದಲ್ಲಿ ಈ ಕೇಸಿನ ಪ್ರತಿವಾದಿ 5 ರಿಂದ 14 ರವರು ವಾಸದ ಮನೆ, ದನದ ಕೊಟ್ಟಿಗೆ, ತಂಬಾಕು ಹದ ಮಾಡುವ ಬ್ಯಾರನ್, ಹಿತ್ತಲುಗಳನ್ನು ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು.

ಅಸಲು ದಾವಾ ನಂಬರ್162/2022 ರಲ್ಲಿ ಈ ಕೇಸಿನ ಪ್ರತಿವಾದಿ 5 ರಿಂದ 14 ರವರನ್ನು ಪಕ್ಷಗಾರರನ್ನಾಗಿ ಮಾಡಿದರೆ ಅವರು ಬಂದು ತಾವು ಸ್ವಾಧೀನದಲ್ಲಿರುವುದಾಗಿ ತಕರಾರು ಸಲ್ಲಿಸುತ್ತಾರೆ ಎಂಬ ಕಾರಣಕ್ಕೆ ಅವರನ್ನು ಪಕ್ಷಗಾರರನ್ನಾಗಿ ಮಾಡದೇ ಏಕಪಕ್ಷೀಯ ಆದೇಶ ಪಡೆದುಕೊಂಡಿದ್ದೇವೆ ಎಂದರೆ ಸುಳ್ಳು. ಆಸ್ತಿಗೆ ಸಂಬಂಧ ಪಡದೇ ಇರುವ ವ್ಯಕ್ತಿಗಳನ್ನು ಅಸಲು ದಾವಾ ನಂಬರ್ 162/2022 ರಲ್ಲಿ ಪ್ರತಿವಾದಿಗಳನ್ನಾಗಿ ಮಾಡಿ ಮೋಸದಿಂದ ಆದೇಶ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ಆರ್ ಟಿ ಸಿ ನಲ್ಲಿ ಕಾಳೇಗೌಡ ಬಿನ್ ಕುಳ್ಳೇಗೌಡ ಮತ್ತು ವೀರಪ್ಪ ಬಿನ್ ಚೆನ್ನವೀರಯ್ಯನವರ ಹೆಸರಿನಲ್ಲಿದ್ದರೂ ಸಹ ಪ್ರತಿವಾದಿ 5 ರಿಂದ 14 ರವರಲ್ಲದೆ ಇತರೆ ಹಲವಾರು ಜನರು ಸುಮಾರು 70 ವರ್ಷಗಳಿಂದ ಮನೆ ಕಟ್ಟಿಕೊಂಡು ಸ್ವಾಧೀನ ಇದ್ದು ಅವರ ಮನೆಗಳಿಗೆ ವಿದ್ಯುತ್ ಮತ್ತು ನಲ್ಲಿ ಸಂಪರ್ಕ ಪಡೆದುಕೊಂಡಿರುವುದಲ್ಲದೇ ಬ್ಯಾರನ್ ಮನೆಗಳಿಗೆ ಲೈಸೆನ್ಸ ಪಡೆದುಕೊಂಡಿದ್ದಾರೆ ಎಂದರೆ ಸುಳ್ಳು. ಆ

ರೀತಿ ನಿರ್ಮಿಸಿರುವ ಮನೆಗಳಿಗೆ ಸರ್ಕಾರದಿಂದ ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ ಎಂದರೆ ಸುಳ್ಳು.

ನನ್ನ ತಂದೆ ಚಿಕ್ಕಪ್ಪ ಮತ್ತು ಚೆನ್ನವೀರಪ್ಪನವರನ್ನು ಕರೆದು ಹಾಲಿ ಪಿರಿಯಾಪಟ್ಟಣದ ಶಾಸಕರು ಪಂಚಾಯಿತಿ ಮಾಡಿ ದಾವಾ ಆಸ್ತಿಯಲ್ಲಿ ಪ್ರತಿವಾದಿ 5 ರಿಂದ 14 ರವರು ಹಾಗೂ ಹರಿಜನ ಕೋಮಿನ ಇತರೆ ಜನರು ಸುಮಾರು 70 ವರ್ಷದಿಂದ ಸ್ವಾಧೀನ ಇರುವುದರಿಂದ ಅವರಿಗೆ ತೊಂದರೆ ಮಾಡಬೇಡಿ ಎಂದು ತೀರ್ಮಾನಿಸಿರುವುದಕ್ಕೆ ನನ್ನ ತಂದೆ, ಚಿಕ್ಕಪ್ಪ ಮತ್ತು ನಮ್ಮ ವಂಶಸ್ಥರು ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಆದ್ದರಿಂದಲೇ ಈ ಕೇಸಿನ ಪ್ರತಿವಾದಿ 5 ರಿಂದ 14 ರವರನ್ನು ಅಸಲು ದಾವಾ ನಂಬರ್ 162/2022 ರಲ್ಲಿ ಪಕ್ಷಗಾರರನ್ನಾಗಿ ಮಾಡದೆ ಸಂಬಂಧಪಡದ ವ್ಯಕ್ತಿಗಳ ವಿರುದ್ಧ ಆದೇಶ ಪಡೆದುಕೊಂಡಿದ್ದೇವೆ ಎಂದರೆ ಸುಳ್ಳು.

ನಮ್ಮ ತಾತನಿಗೆ ಜಮೀನು ಮಾರಾಟ ಮಾಡಿರುವವರು ತೀರಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಾತನಿಗೆ ಜಮೀನು ಮಾರಾಟ ಮಾಡಿದವರ ಮಗ ಎಫ್.ಡಿ.ಪಿ ನಂಬರ್ 14/2020 ರಲ್ಲಿ ತಕರಾರು ಸಲ್ಲಿಸಿ ದಾವಾ ಸರ್ವೆ ನಂಬರ್ 1 ರಲ್ಲಿ ನಾವು ಸ್ವಾಧೀನವಿರುವುದಿಲ್ಲ ಪ್ರತಿವಾದಿ 5 ರಿಂದ 14 ಮತ್ತು ಮಠದಕೊಪ್ಪಲಿನ ಇತರೆ ಜನರು ಸ್ವಾಧೀನ ಇದ್ದು ಮನೆ, ಬ್ಯಾರನ್ ಮತ್ತು ದನದಕೊಟ್ಟಿಗೆ ನಿರ್ಮಿಸಿರುವುದಾಗಿ ಹೇಳಿದ್ದರು ಎಂದರೆ ಸುಳ್ಳು. ಆದರೂ ಸಹ ನನ್ನ ತಂದೆ ಆಸ್ತಿಯನ್ನು ಕಬಳಿಸಬೇಕೆಂದು ಈ ಸುಳ್ಳು ದಾವೆಯಲ್ಲಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**